# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪<br>Part – IV | ಬೆಂಗಳೂರು, ಸೋಮವಾರ, ೦೪, ಮಾರ್ಚ್, ೨೦೨೪(ಫಾಲ್ಗುಣ, ೧೪, ಶಕವರ್ಷ, ೧೯೪೫)<br>BENGALURU, MONDAY, 04, MARCH, 2024(PHALGUNA , 14, SHAKAVARSHA, 1945) | ನಂ. ೧೫೧<br>No. 151 |
|---|---|---|


**PERSONNEL AND ADMINISTRATIVE REFORMS SECRETARIAT**

**NOTIFICATION**

**No.DPAR 01 CHUVEBHA (ADDL.CEO 1)2024, Bengaluru, Dated: 04.03.2024**

The following Order No. 76/KT-LA/06/2023/CEMS-II Dated, 07th February, 2024 of the Election Commission of India is republished hereunder for general information:

# ELECTION COMMISSION OF INDIA

**Nirvachan Sadan, Ashoka Road, New Delhi-110001**

**No: 76/KT-LA/06/2023/CEMS-II** **Dated: 07th February, 2024 / 18 Magha, 1945(Saka)**

## ORDER

**WHEREAS,** the General Election to Legislative Assembly of Karnataka, 2023 for **171-Padmanabanagar** Assembly Constituency was held in pursuance of the Election Commission of India Notification No.464/KT-LA/2023, dated 13th April, 2023; and

**WHEREAS,** as per Section 78 of the Representation of the People Act, 1951, every contesting candidate at an election shall, within 30 days from the date of election of the returned candidate, lodge with the District Election Officer an account of his election expenses which shall be a true copy of the account kept by him or his election agent under Section 77 of the said act; and

**WHEREAS,** the result of the election for **171-Padmanabanagar** Assembly Constituency of Karnataka, 2023 was declared by the Returning Officer on 13th May, 2023 and hence the last date for lodging the account of Election Expenses was 12th June, 2023; and

**WHEREAS**, as per the report of the **DEO, Bengaluru South** dated **13.06.2023** under sub-rule(1) of Rule 89 of the Conduct of Elections Rules, 1961

received through the CEO, Karnataka vide his letter no. DPAR 27 CHUVEBA (Addl CEO-1) 2023, dated 27.06.2023 stating that **Mohammed Idris.K.S,** a contesting candidate from **171-Padmanabanagar** Assembly Constituency in General Election to Legislative Assembly of Karnataka, 2023 has failed to lodge the account of his election expenses, as required under law; and

**WHEREAS,** on basis of the said report of the District Election Officer, **Bengaluru South** a Show-Cause notice No. 76/KT-LA/06/2023/CEMS-II, dated 28th August, 2023 was issued under sub rule(5) of Rule 89 of the Conduct of Elections Rules, 1961 by the Election Commission of India to **Mohammed Idris.K.S,** for not lodging of the account of Election Expenses; and

**WHEREAS,** through the above said Show Cause Notice and under sub rule(6) of Rule 89 of the Conduct of Elections Rules, 1961, **Mohammed Idris.K.S** was directed to submit representation in writing to the Commission explaining the reasons for not lodging the account and also to lodge the account of his election expenses with the District Election Officer, **Bengaluru South** District within 20 days from the date of receipt of the notice; and

**WHEREAS,** the DEO, **Bengaluru South** in his report no. ELN/(C)PR/1154/2023-24; dated 03/06.10.2023 has reported that the said Show Cause Notice was served to **Mohammed Idris.K.S** on **05.09.2023**; and

**WHEREAS,** the District Election Officer, **Bengaluru South** in his Supplementary Report no. ELN(C)/PR/1154/2023-24 dated 03/06.10.2023 on account of candidate received through CEO, Karnataka letter No. DPAR/27/CHUVEBA/Addl CEO-1/2023; dated 07.10.2023 has reported that **Mohammed Idris.K.S** has not submitted any representation or statement of account of election expenses. Further, after receipt of the said notice, **Mohammed Idris.K.S** has neither furnished any reason nor explanation to the Election Commission of India for failure to lodge the account of his election expenses as prescribed under law; and

**WHEREAS,** Section 10A of the Representation of the People Act, 1951 provides that:-

*"If the Election Commission is satisfied that a person-*
*(a) has failed to lodge an account of election expenses within the time and in the manner required by or under this Act, and*
*(b) has no good reason or justification for the failure,*
*the Election Commission shall, by order published in the official Gazette, declare him to be disqualified and any such person shall be disqualified for a period of three years from the date of the order.";*

**WHEREAS,** on basis of the facts and available records, the Commission is satisfied that **Mohammed Idris.K.S** has failed to lodge the account of his election expenses and has no good reason or justification for the failure to do so; and

**NOW, THEREFORE,** in pursuance of Section 10A of the Representation of the People Act, 1951, the Election Commission of India hereby declares **Mohammed Idris.K.S,** resident of **No.402, 7th Cross, 1st Block, Jayanagar, Bangalore-560011** and a contesting candidate from **171-Padmanabanagar** Assembly Constituency of G.E. to LA of Karnataka, 2023, to be disqualified for being chosen as and for being a member of either House of the Parliament or the Legislative Assembly or the Legislative Council of a State or Union Territory for a period of three years from the date of this order.

**(SUJEET KUMAR MISHRA)**
**SECRETARY**

To.

**Mohammed Idris.K.S,**
**No.402, 7th Cross, 1st Block, Jayanagar, Bangalore-560 011**

**(Madhu A.C)**
**Under Secretary to Government,**
**DPAR(Elections), Karnataka**

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ
## ಅಧಿಸೂಚನೆ

**ಸಂ: ಸಿಆಸುಇ 01 ಚುವೆಭ(ಅಮುಚುಅ-1) 2024, ಬೆಂಗಳೂರು ದಿನಾಂಕ: 04.03.2024**

ಭಾರತ ಚುನಾವಣಾ ಆಯೋಗದ ಈ ಕೆಳಕಂಡ ಆದೇಶ ಸಂ: 76/ಕೆಟಿ-ಎಲ್ಎ/06/2023/ಸಿಇಎಂಎಸ್-II ದಿನಾಂಕ: 07.02.2024 ಅನ್ನು ಸಾಮಾನ್ಯ ಮಾಹಿತಿಗಾಗಿ ಪುನರ್ ಪ್ರಕಟಿಸಿದೆ.

**ಭಾರತ ಚುನಾವಣಾ ಆಯೋಗ**
**ನಿರ್ವಾಚನ ಸದನ, ಅಶೋಕ ರಸ್ತೆ, ನವದೆಹಲಿ-110001** ರಸ್ತೆ,

**ಸಂಖ್ಯೆ: 76/ಕೆಟಿ-ಎಲ್ಎ/06/2023/ಸಿಇಎಂಎಸ್-II ದಿನಾಂಕ: 07ನೇ ಫೆಬ್ರವರಿ, 2024**
**ಮಾಘ ಮಾಸದ 18ನೇ ದಿನ, 1945 (ಶಕ)**

**ಆದೇಶ**

ಭಾರತ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ: 464/ಕೆಟಿ-ಎಲ್ಎ/2023, ದಿನಾಂಕ: 13ನೇ ಏಪ್ರಿಲ್, 2023ರ ಅನುಸಾರವಾಗಿ ಕರ್ನಾಟಕ ವಿಧಾನಸಭೆ– 2023ರ **171-ಪದ್ಮನಾಭನಗರ** ವಿಧಾನಸಭಾ ಮತಕ್ಷೇತ್ರಕ್ಕೆ ಸಾರ್ವತ್ರಿಕ-ಚುನಾವಣೆ ನಡೆಸಿರುವುದರಿಂದ; ಮತ್ತು

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 78ನೇ ಪ್ರಕರಣದ ಅನುಸಾರ, ಚುನಾವಣೆಗೆ ಸ್ಪರ್ಧಿಸಿದ ಪ್ರತಿಯೊಬ್ಬ ಅಭ್ಯರ್ಥಿಯು, ಚುನಾವಣೆಯಲ್ಲಿ ಜಯಿಸಿದ ಅಭ್ಯರ್ಥಿಯನ್ನು ಘೋಷಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಸದರಿ ಅಧಿನಿಯಮದ 77ನೇ ಪ್ರಕರಣದ ಅಡಿಯಲ್ಲಿ, ಆತ ಅಥವಾ ಆತನ ಚುನಾವಣಾ ಏಜೆಂಟರು ಇಟ್ಟುಕೊಂಡಿರುವ ಲೆಕ್ಕದ ನೈಜ ಪ್ರತಿ ಆಗಿರತಕ್ಕ ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಜಿಲ್ಲಾ ಚುನಾವಣಾ ಅಧಿಕಾರಿಯವರಿಗೆ ಸಲ್ಲಿಸಬೇಕಾಗಿರುವುದರಿಂದ; ಮತ್ತು

ರಿಟರ್ನಿಂಗ್ ಅಧಿಕಾರಿಯವರು, ದಿನಾಂಕ: **13ನೇ ಮೇ 2023ರಂದು** ಕರ್ನಾಟಕದ ವಿಧಾನಸಭೆ - 2023ರ **171-ಪದ್ಮನಾಭನಗರ** ಮತಕ್ಷೇತ್ರಕ್ಕೆ ಚುನಾವಣಾ ಫಲಿತಾಂಶವನ್ನು ಘೋಷಿಸಿರುವುದರಿಂದ ಮತ್ತು ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ಕಡೆಯ ದಿನಾಂಕ: **12ನೇ ಜೂನ್ 2023** ಆಗಿರುವುದರಿಂದ; ಮತ್ತು

ಮುಖ್ಯ ಚುನಾವಣಾಧಿಕಾರಿ (ಸಿಇಓ), ಕರ್ನಾಟಕ ಇವರ ಪತ್ರ ಸಂಖ್ಯೆ: ಡಿಪಿಎಆರ್ 27 ಚುವೆಭ (ಅಪರ ಸಿಇಓ-1)2023, ದಿನಾಂಕ: 27.06.2023ರ ಮುಖಾಂತರ ಸ್ವೀಕರಿಸಿದ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 89ನೇ ನಿಯಮದ 1ನೇ ಉಪ-ನಿಯಮದ ಮೇರೆಗಿನ ಜಿಲ್ಲಾ ಚುನಾವಣಾ ಅಧಿಕಾರಿ (ಡಿಇಓ), ಬೆಂಗಳೂರು ದಕ್ಷಿಣ ದಿನಾಂಕ: 13.06.2023 ಇವರ ವರದಿಯ ಪ್ರಕಾರ ಕರ್ನಾಟಕದ ವಿಧಾನಸಭಾ ಸಾರ್ವತ್ರಿಕ-ಚುನಾವಣೆ 2023ರಲ್ಲಿ **171-ಪದ್ಮನಾಭನಗರ** ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ ಅಭ್ಯರ್ಥಿಯಾದ **ಮಹಮ್ಮದ್ ಇದ್ರಿಸ್.ಕೆ.ಎಸ್,** ಇವರು ಕಾನೂನಿನ ಅಡಿಯಲ್ಲಿ ಅಗತ್ಯಪಡಿಸಿದಂತೆ, ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲರಾಗಿದ್ದರೆಂದು ಹೇಳಲಾಗಿರುವುದರಿಂದ; ಮತ್ತು

ಜಿಲ್ಲಾ ಚುನಾವಣಾ ಅಧಿಕಾರಿ, **ಬೆಂಗಳೂರು ದಕ್ಷಿಣ** ಇವರ ಸದರಿ ವರದಿಯ ಆಧಾರದ ಮೇಲೆ, ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸದಿರುವುದಕ್ಕಾಗಿ **ಮಹಮ್ಮದ್ ಇದ್ರಿಸ್.ಕೆ.ಎಸ್.** ರವರಿಗೆ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 89ನೇ ನಿಯಮದ (5)ನೇ ಉಪ-ನಿಯಮದ ಅಡಿಯಲ್ಲಿ ಭಾರತ ಚುನಾವಣಾ ಆಯೋಗವು ಕಾರಣ ಕೇಳಿ

ನೋಟಿಸ್ **ಸಂಖ್ಯೆ: 76/ಕೆಟಿ-ಎಲ್‌ಎ/06/2023/ಸಿಇಎಂಎಸ್-II ದಿನಾಂಕ: 28ನೇ ಆಗಸ್ಟ್ 2023** ರಂದು ನೀಡಲಾಗಿರುವುದರಿಂದ; ಮತ್ತು

ಮೇಲೆ ಹೇಳಿದ ಕಾರಣ ಕೇಳುವ ನೋಟಿಸ್‌ನ ಮೂಲಕ ಮತ್ತು ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 89ನೇ ನಿಯಮದ (6)ನೇ ಉಪ-ನಿಯಮದ ಅಡಿಯಲ್ಲಿ, ನೋಟಿಸ್ ಸ್ವೀಕರಿಸಿದ ದಿನಾಂಕದಿಂದ 20 ದಿನಗಳ ಒಳಗಾಗಿ ತಮ್ಮ ಲೆಕ್ಕಪತ್ರಗಳನ್ನು ಸಲ್ಲಿಸದಿರುವುದಕ್ಕೆ ಕಾರಣವನ್ನು ವಿವರಿಸಿ ಆಯೋಗಕ್ಕೆ ಲಿಖಿತದಲ್ಲಿ ಮನವಿ ಸಲ್ಲಿಸುವಂತೆ ಹಾಗೂ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು **ಜಿಲ್ಲಾ ಚುನಾವಣಾಧಿಕಾರಿ, ಬೆಂಗಳೂರು ದಕ್ಷಿಣ,** ಇವರಿಗೆ ಸಲ್ಲಿಸುವಂತೆಯೂ ಸಹ **ಮಹಮ್ಮದ್ ಇದ್ರಿಸ್.ಕೆ.ಎಸ್** ರವರಿಗೆ ನಿರ್ದೇಶಿಸಿರುವುದರಿಂದ; ಮತ್ತು

ಜಿಲ್ಲಾ ಚುನಾವಣಾ ಅಧಿಕಾರಿ, **ಬೆಂಗಳೂರು ದಕ್ಷಿಣ** ಇವರ ವರದಿ ಸಂಖ್ಯೆ: ಇಎಲ್ಎನ್ (ಸಿ)/ಪಿಆರ್/1154/2023-24, ದಿನಾಂಕ 03/06.10.2023 ರಲ್ಲಿ **ಮಹಮ್ಮದ್ ಇದ್ರಿಸ್.ಕೆ.ಎಸ್.** ಇವರಿಗೆ **ದಿನಾಂಕ: 05.09.2023** ರಂದು ಕಾರಣ ಕೇಳಿ ನೋಟಿಸ್‌ನ್ನು ನೀಡಲಾಗಿದೆ ಎಂದು ವರದಿ ಮಾಡಿರುವುದರಿಂದ; ಮತ್ತು

ಮುಖ್ಯ ಚುನಾವಾಣಾಧಿಕಾರಿ (ಸಿಇಓ), ಕರ್ನಾಟಕ, ಇವರ ಪತ್ರ ಸಂಖ್ಯೆ. ಡಿಪಿಎಆರ್/27/ಚುವೆಭ ಅಪರ ಸಿಇಓ-I /2023; ದಿನಾಂಕ: 07.10.2023ರ ಮೂಲಕ ಸ್ವೀಕರಿಸಲಾದ ಅಭ್ಯರ್ಥಿಯ ಲೆಕ್ಕಪತ್ರವನ್ನು ಕುರಿತಾದ ಜಿಲ್ಲಾ ಚುನಾವಣಾ ಅಧಿಕಾರಿ, **ಬೆಂಗಳೂರು ದಕ್ಷಿಣ** ಇವರು ತಮ್ಮ ಪೂರಕ ವರದಿ ಸಂಖ್ಯೆ: ಇಎಲ್ಎನ್(ಸಿ)/ಪಿಆರ್/1154/2023-24, ದಿನಾಂಕ:03/06.10.2023 ರಲ್ಲಿ, **ಮಹಮ್ಮದ್ ಇದ್ರಿಸ್.ಕೆ.ಎಸ್.** ರವರು ಯಾವುದೇ ಮನವಿ ಅಥವಾ ಚುನಾವಣಾ ವೆಚ್ಚಗಳ ಸರಿಯಾದ ಲೆಕ್ಕಪತ್ರದ ವಿವರಪಟ್ಟಿಯನ್ನು ಸಲ್ಲಿಸಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಅಲ್ಲದೇ, ಸದರಿ ನೋಟಿಸನ್ನು ಸ್ವೀಕರಿಸಿದ ನಂತರವೂ, **ಮಹಮ್ಮದ್ ಇದ್ರಿಸ್.ಕೆ.ಎಸ್.** ರವರು ಕಾನೂನಿನ ಅಡಿಯಲ್ಲಿ ನಿಯಮಿಸಲಾದಂತೆ ಭಾರತದ ಚುನಾವಣಾ ಆಯೋಗಕ್ಕೆ ತಮ್ಮ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲವಾಗಿರುವುದಕ್ಕಾಗಿ ಯಾವುದೇ ಕಾರಣವನ್ನಾಗಲಿ ಅಥವಾ ಯಾವುದೇ ವಿವರಣೆಯನ್ನಾಗಲಿ ನೀಡಿಲ್ಲದಿರುವುದರಿಂದ; ಮತ್ತು

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ಎ ಪ್ರಕರಣದಲ್ಲಿ ಈ ಕೆಳಕಂಡಂತೆ ಉಪಬಂಧಿಸಲಾಗಿರುವುದರಿಂದ ಎಂದರೆ :-

*"ಒಬ್ಬ ವ್ಯಕ್ತಿಯು,*

*(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಗತ್ಯಪಡಿಸಿದ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲನಾಗಿದ್ದಾನೆಂದು; ಮತ್ತು*

*(ಬಿ) ಹಾಗೆ ವಿಫಲನಾಗಿರುವುದಕ್ಕೆ ಯಾವುದೇ ಸರಿಯಾದ ಕಾರಣ ಅಥವಾ ಸಮರ್ಥನೆಯನ್ನು ಅವನು ಹೊಂದಿಲ್ಲವೆಂದು*

*– ಚುನಾವಣಾ ಆಯೋಗಕ್ಕೆ ಮನದಟ್ಟಾದರೆ, ಚುನಾವಣಾ ಆಯೋಗವು ರಾಜ್ಯಪತ್ರದಲ್ಲಿ ಪ್ರಕಟವಾದ ಆದೇಶದ ಮೂಲಕ ಅವನು ಅನರ್ಹನಾಗಿದ್ದಾನೆಂದು ಘೋಷಿಸತಕ್ಕದ್ದು ಮತ್ತು ಅಂಥ ಯಾವುದೇ ವ್ಯಕ್ತಿಯನ್ನು ಆ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅನರ್ಹಗೊಳಿಸತಕ್ಕದ್ದು" ಎಂದು ಉಪಬಂಧಿಸಿರುವುದರಿಂದ;*

ವಾಸ್ತವ ಸಂಗತಿಗಳು ಮತ್ತು ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ, **ಮಹಮ್ಮದ್ ಇದ್ರಿಸ್.ಕೆ.ಎಸ್.** ರವರು ತಮ್ಮ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲರಾಗಿದ್ದಾರೆಂದು ಮತ್ತು ಹಾಗೆ ಸಲ್ಲಿಸಲು ವಿಫಲರಾಗಿದ್ದಕ್ಕೆ ಯಾವುದೇ ಸೂಕ್ತ ಕಾರಣವನ್ನು ಅಥವಾ ಸಮರ್ಥನೆಯನ್ನು ನೀಡಿಲ್ಲವೆಂದು ಆಯೋಗಕ್ಕೆ ಮನವರಿಕೆಯಾಗಿರುವುದರಿಂದ; ಮತ್ತು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಈಗ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ಎ ಪ್ರಕರಣದ ಅನುಸಾರವಾಗಿ, ಭಾರತ ಚುನಾವಣಾ ಆಯೋಗವು ಸಂಖ್ಯೆ. 402, 7ನೇ ಅಡ್ಡರಸ್ತೆ, ಮೊದಲನೇ ಬ್ಲಾಕ್, ಜಯನಗರ, ಬೆಂಗಳೂರು - 560011ರ ನಿವಾಸಿಯಾಗಿರುವ ಮತ್ತು 2023 ರ **ಕರ್ನಾಟಕದ ವಿಧಾನಸಭೆ – 2023ರ 171- ಪದ್ಮನಾಭನಗರ ಮತಕ್ಷೇತ್ರಕ್ಕೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಿದ** ಅಭ್ಯರ್ಥಿಯಾಗಿರುವ **ಮಹಮ್ಮದ್ ಇದ್ರಿಸ್.ಕೆ. ಎಸ್, ಇವರನ್ನು** ಈ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಸಂಸತ್ತಿನ ಉಭಯ ಸದನಗಳ ಅಥವಾ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರಾಗಿ ಚುನಾಯಿತಗೊಳ್ಳುವುದಕ್ಕೆ ಮತ್ತು ಸದಸ್ಯರಾಗುವುದಕ್ಕೆ ಅನರ್ಹರಾಗಿದ್ದಾರೆಂದು ಈ ಮೂಲಕ ಘೋಷಿಸಿದೆ.

ಸಹಿ/-
**(ಸುಜೀತ್ ಕುಮಾರ್ ಮಿಶ್ರಾ)**
**ಕಾರ್ಯದರ್ಶಿ**

**ಇವರಿಗೆ:**
**ಮಹಮ್ಮದ್ ಇದ್ರಿಸ್.ಕೆ.ಎಸ್.**
**ಸಂಖ್ಯೆ.402, 7ನೇ ಅಡ್ಡರಸ್ತೆ,**
**ಮೊದಲನೇ ಬ್ಲಾಕ್, ಜಯನಗರ,**
**ಬೆಂಗಳೂರು-560011**

(**ಮಧು ಎ.ಸಿ**)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ(ಚುನಾವಣೆಗಳು)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH